# ಭಗವಚ್ಚಿಂತನೆ



✿ ನೀವು ಯಾರ ಚಿಂತನೆ ಮಾಡುತ್ತೀರೋ ಅವರ ಸತ್ತ್ವ ನಿಮಗೆ ಬಂದುಬಿಡುತ್ತದೆ. ಹಗಲು ಇರುಳು ಭಗವಂತನ ಚಿಂತನೆ ಮಾಡುತ್ತಿದ್ದರೆ ಭಗವಂತನ ಸತ್ತ್ವ ನಿಮಗೆ ಬಂದುಬಿಡುತ್ತದೆ. ಉಪ್ಪಿನ ಗೊಂಬೆ ಸಮುದ್ರ ಅಳೆಯಲು ಹೋಗಿ ಅದೂ ಸಮುದ್ರವೇ ಆಗಿಬಿಟ್ಟಿತು. ಗ್ರಂಥಗಳ ಅಥವಾ ಶಾಸ್ತ್ರಗಳ ಉದ್ದೇಶವೇನು? ಭಗವಂತನ ಸಾಕ್ಷಾತ್ಕಾರ ದೊರಕಿಸಿ ಕೊಡುವುದು.

✿ ಸಂಸಾರಾಸಕ್ತ ಬದ್ಧಜೀವರು ಸಾಯುವ ಸಮಯದಲ್ಲಿ ಸಾಂಸಾರಿಕ ಮಾತುಕತೆಗಳನ್ನೇ ಆಡುತ್ತಾರೆ. ತೋರಿಕೆಗಾಗಿ ಜಪಮಾಲೆ ತಿರುಗಿಸಿದರೆ, ಗಂಗಾಸ್ನಾನ ಮಾಡಿದರೆ, ತೀರ್ಥಯಾತ್ರೆ ಮಾಡಿದರೆ ಏನು ತಾನೆ ದೊರಕೀತು? ಅಂತರ್ಯದಲ್ಲಿ ಸಂಸಾರಾಸಕ್ತಿ ಇದ್ದರೆ ಸಾಯುವಾಗ ಅದು ಹೊರಕ್ಕೆ ಕಾಣಿಸಿಕೊಂಡುಬಿಡುತ್ತದೆ. ಆಗ ಬರೀ ಅಬದ್ಧವನ್ನೇ ಬೊಗಳುವರು. ಬಹುಶಃ ಮತಿಭ್ರಮಣೆಯಿಂದ ಚೀತ್ಕಾರ ಮಾಡಬಹುದು; 'ಅರಿಸಿನ, ಒಗ್ಗರಣೆ! ಕರಿಬೇವಿನ ಸೊಪ್ಪು!' ಎಂದು. ಅರಗಿಣಿ ಯಾವ ತೊಂದರೆಗೂ ಈಡಾಗದಿರುವಾಗ, 'ರಾಧಾ, ಕೃಷ್ಣ' ಎಂದು ಹೇಳುತ್ತದೆ; ಆದರೆ ಅದನ್ನು ಬೆಕ್ಕು ಹಿಡಿಯಿತೆಂದರೆ ಅದರ ಸ್ವಂತ ಕೂಗು ಹೊರಗೆ ಬರುತ್ತದೆ. ಆಗ 'ಕ್ಯಾ! ಕ್ಯಾ!' ಎಂದು ಕಿರಿಚಿಕೊಳ್ಳುತ್ತದೆ. ಸಾಯುವ ಸಮಯದಲ್ಲಿ ಏನೇನು ಭಾವನೆಗಳು ಬರುವವೊ, ಅವುಗಳಂತೆಯೇ ಮುಂದಿನ ಜನ್ಮದಲ್ಲಿ ಫಲ ದೊರಕುವುದು ಎಂಬುದಾಗಿ ಗೀತೆಯಲ್ಲಿ ಹೇಳಿದೆ. ಭರತರಾಜ, 'ಜಿಂಕೆ! ಜಿಂಕೆ!' ಎಂದು ಕೂಗಿಕೊಳ್ಳುತ್ತಲೆ ದೇಹತ್ಯಾಗ ಮಾಡಿದ. ಅದಕ್ಕಾಗಿ ಮುಂದಿನ ಜನ್ಮದಲ್ಲಿ ಆತನಿಗೆ ಜಿಂಕೆಯ ಜನ್ಮ ದೊರೆಯಿತು. ಭಗವಂತನ ಚಿಂತನೆ ಮಾಡುತ್ತ ದೇಹತ್ಯಾಗ ಮಾಡಿದರೆ ಭಗವಂತನ ಸಾಕ್ಷಾತ್ಕಾರ ದೊರಕುತ್ತದೆ. ಮತ್ತೆ ಈ ಸಂಸಾರಕ್ಕೆ ಬರಬೇಕಾಗಿಲ್ಲ.

✿ ಮನುಷ್ಯನಿಗೆ ಭಗವಂತನಲ್ಲಿ ವಿಶ್ವಾಸವಿಲ್ಲ; ಅದಕ್ಕಾಗಿಯೆ ಆತ ಅಷ್ಟೊಂದು ದುಃಖವನ್ನು ಅನುಭವಿಸುವುದು. ಜನ ಹೇಳುತ್ತಾರೆ, 'ಗಂಗಾಸ್ನಾನದ ಸಮಯದಲ್ಲಿ ಜನರ ಪಾಪಗಳೆಲ್ಲ ಅವರವರನ್ನು ಬಿಟ್ಟು ಗಂಗೆಯ ತೀರದಲ್ಲಿರುವ ಗಿಡಗಳ ಮೇಲೆ ಕುಳಿತುಕೊಂಡಿರುತ್ತವೆ. ಸ್ನಾನ ಮುಗಿಸಿ ದಡಕ್ಕೆ ಬರುವುದೇ ತಡ ಒಡನೆಯೆ ಅವು ನೆಗೆದು ಅವರವರ ಹೆಗಲನ್ನು ಹತ್ತಿಬಿಡುತ್ತವೆ' ಎಂದು. ದೇಹತ್ಯಾಗದ ಸಮಯದಲ್ಲಿ ಭಗವಂತನ ಚಿಂತನೆ ಬರಬೇಕಾದರೆ, ಬದುಕಿರುವಾಗಲೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ — ಅಭ್ಯಾಸಯೋಗ, ಭಗವಚ್ಚಿಂತನೆಯ ಅಭ್ಯಾಸವನ್ನು ಮಾಡಿದ್ದರೆ ಜೀವನದ ಕೊನೆಯ ದಿನವೂ ಆತನ ಭಾವನೆ ಮನಸ್ಸಿನಲ್ಲಿ ಏಳುತ್ತದೆ.

✿ ಮನುಷ್ಯ ಭಗವಚ್ಚಿಂತನೆಯನ್ನೇನೋ ಮಾಡುತ್ತಾನೆ, ಆದರೆ ಆತನ ಇರುವಿಕೆಯಲ್ಲಿ ಆತನಿಗೆ ವಿಶ್ವಾಸವಿಲ್ಲ; ಮತ್ತೆ ಮತ್ತೆ ಭಗವಂತನನ್ನು ಮರೆಯುತ್ತಾನೆ, ಮತ್ತೆ ಸಂಸಾರದಲ್ಲಿ ಆಸಕ್ತನಾಗುತ್ತಾನೆ. ಇದು ಆನೆಗೆ ಮೈ ತೊಳೆದ ಹಾಗೆ; ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಮೆತ್ತಿಕೊಂಡುಬಿಡುತ್ತದೆ. 'ಮನಸ್ಸೆಂಬುದು ಒಂದು ಮದಿಸಿದ ಆನೆ.' ಆದರೆ ಆನೆಗೆ ಮೈ ತೊಳೆದ ಒಡನೆಯೆ ಅದನ್ನು ತೆಗೆದುಕೊಂಡು ಲಾಯದಲ್ಲಿ ಕಟ್ಟಿಹಾಕಿದರೆ ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಬಳಿದುಕೊಳ್ಳಲಾರದು. ಮನುಷ್ಯ ಮೃತ್ಯುಶಯ್ಯೆಯಲ್ಲಿ ಭಗವಂತನ ಚಿಂತನೆ ಮಾಡಿದರೆ ಆತನ ಮನಸ್ಸು ಶುದ್ಧವಾಗುತ್ತದೆ. ಬಳಿಕ ಆ ಮನಸ್ಸಿಗೆ ಮತ್ತೆ ಕಾಮ ಕಾಂಚನದಲ್ಲಿ ಆಸಕ್ತವಾಗಲು ಅವಕಾಶ ದೊರೆಯದು.

✿ ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯರಸ ಬತ್ತಿಹೋಗಿರುವುದೊ ಅವರಿಗೆ ಒಂದು ಸ್ವಲ್ಪದರಿಂದಲೆ ಭಗವದ್ಭಾವನೆಯ ಉದ್ದೀಪನೆಯಾಗಿಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

✿ ಕೆಲಕೆಲವರು ಭಾವಿಸುತ್ತಾರೆ, 'ಇವರು ಕೇವಲ ಭಗವಚ್ಚಿಂತನೆ ಮಾಡುತ್ತಾರೆ; ಹುಚ್ಚರು ಇವರು. ಇವರಿಗೆ ತಲೆ ಕೆಟ್ಟುಹೋಗಿದೆ. ನಾವೆಷ್ಟು ಬುದ್ಧಿವಂತರು! ನಾವು ಹೇಗೆ ಸುಖೋಪಭೋಗ — ಹಣ, ಹೆಸರು, ಕೀರ್ತಿ, ಇಂದ್ರಿಯಸುಖ ಪಡುತ್ತಿದ್ದೇವೆ!' ಅಂತ. ಕಾಗೆಯೂ ಭಾವಿಸುತ್ತದೆ, ತಾನೂ ಬಹಳ ಬುದ್ಧಿಶಾಲಿ ಹಕ್ಕಿ ಅಂತ. ಆದರೆ ಅದು ಬೆಳಗ್ಗೆ ಏಳುವುದೇ ತಡ, ಒಡನೆಯೆ ಹೋಗಿ ಪರರ ಹೇಸಿಗೆ ತಿಂದೇ ಸಾಯುತ್ತದೆ. ನೋಡಿಲ್ಲವೆ ಕಾಗೆ ಎಷ್ಟೊಂದು ಬಿಂಕದಿಂದ ನಡೆಯುತ್ತದೆ ಎನ್ನುವುದನ್ನು? ಬಹಳ ಬುದ್ಧಿಶಾಲಿ ಹಕ್ಕಿಯೇ!

✿ ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು. ಇನ್ನೊಂದು ಕೈಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು, ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೊ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೆ ನಿರತನಾಗಿರಬೇಕು.

ಶ್ರೀರಾಮಕೃಷ್ಣ ವಚನವೇದದಿಂದ ✿